# ಇಳಕಲ್ ಸೀರೆ ಮೆಚ್ಚಿದಿಹಳೇ ನೀರೆ!

**ಇಳಕಲ್ ಸೀರೆ ತನ್ನ ಸಾಂಪ್ರದಾಯಿಕ ಸೌಂದರ್ಯ, ಆಕರ್ಷಕ ವರ್ಣ ಸಂಯೋಜನೆ, ದಿಟ್ಟ ಉಜ್ವಲ ಬಣ್ಣಗಳು, ಹಾಗೂ 'ಕೊಂಡಿ' ತಂತ್ರಗಳಿಂದ ಗಮನ ಸೆಳೆಯುತ್ತದೆ. ಇಳಕಲ್ ಸೀರೆ ಹಾಗೂ ಗುಳೇದಗುಡ್ಡದ ಖಣಗಳದ್ದು ಒಂದು ಅಮೋಘ ಜುಗಲ್‌ಬಂದಿ!**

■ ಮುಕುಂದ್ ಕಿರಸೂರ್
ವೈ.ಸಿ. ರಾಧಾಲಕ್ಷ್ಮಿ



ಕಣ್ಣಿಗೆ ರಾಚುವ ರಣ ರಣ ಹಳದಿ ಬಿಸಿಲು, ಕಮೈಯಿಂದ ದಳ ದಳನೆ ಬೆವರಿಳಿಸುವ ಮೇ ತಿಂಗಳ ಕಡು ಬೇಸಿಗೆಯ ಒಂದು ಮಧ್ಯಾಹ್ನ ಇಳಕಲ್ ಪಟ್ಟಣ ತಲುಪಿದಾಗ ಮೂಡಿದ್ದು ಒಂದೇ ಪ್ರಶ್ನೆ! ಈ ಪ್ರಖ್ಯಾತ ಕಲಾತ್ಮಕ ಸೀರೆಗಳಿಗೆ ಜೀವ ತುಂಬುವ ನೇಕಾರನ ಮನಸ್ಸು ಈ ಶುಷ್ಕ ವಾತಾವರಣದಲ್ಲಿ ಇಷ್ಟೊಂದು ಲವಲವಿಕೆಯಿಂದ ನೇಯ್ಗೆಗೆ ಸ್ಪಂದಿಸುವುದಾದರೂ ಹೇಗೆ ಸಾಧ್ಯ? ಊರಿನ ಗಲ್ಲಿ ಗಲ್ಲಿಗಳಲ್ಲೂ ಮಗ್ಗಗಳ ಲಟಪಟ ಸದ್ದು!

ಹೊಸಪೇಟೆ ಗಲ್ಲಿಯ ಮಾರುತಿ ಅಂಬಣ್ಣ ಕಾಂಬಳೆರವರ ಮನೆಗೆ ಹೋದಾಗ ಅವರು ಮಗ್ಗದ ಮೇಲಿದ್ದರೆ ಅವರ ಹೆಂಡತಿ ಕಂಡಿಕೆ ಸುತ್ತುತ್ತಿದ್ದರು. ಸಮಾಜಶಾಸ್ತ್ರದಲ್ಲಿ ಎಂಎ ಪದವೀಧರ ಇವರು. ಇಳಕಲ್ ಸೀರೆಯ ಕುರಿತಾಗಿ ಬರೆಯುವ ಉದ್ದೇಶವನ್ನು ವಿವರಿಸಿದಾಗ ಮುಗುಳ್ನಕ್ಕು, 'ಸಾಹೇಬ್ರ, ನಿಮ್ಹಾಂಗ ಭಾಳ ಮಂದಿ ಬಂದು ಇಲ್ಲಿ ಸೀರಿ, ನೇಕಾರ್ರು ಎಲ್ಲದರ ಬಗ್ಗೆ ಪೇಪರನ್ಯಾಗ, ಪತ್ರಿಕೆಯೊಳಗ ಬರದಾರ್ರಿ, ಭಾಳ ಸಲ ಟಿ.ವಿ. ಯವರೂ ಬಂದು ಹೋಗ್ಯಾರ್ರಿ! ಆದ್ರ ಇಷ್ಟೆಲ್ಲಾ ಪ್ರಚಾರ ಮಾಡಿದ್ರೂ ನೇಕಾರರಿಗೆ ಒಂದು ಕಾಸಿನ ಪ್ರಯೋಜನಾನೂ ಆಗಿಲ್ರೀ' ಎನ್ನುತ್ತಲೇ ನಮ್ಮೊಡನೆ ಮಾತಿಗೆ ಕುಳಿತರು. ಬೇಡ ಬೇಡವೆಂದರೂ ನಮಗೂ ಒಗ್ಗರಣೆ ಸೂಸಲಾ, ಮಿರ್ಚಿ ಭಜಿ ಮತ್ತು ಖಡಕ್ ಚಹಾದ ಸಮಾರಾಧನೆ ಬೇರೆ.

'ಈ ಊರಿನಾಗ ಎರಡೇ ಉದ್ಯೋಗರ್ರಿ ಸಾಹೇಬ್ರ. ಒಂದು ಒಕ್ಕಲತನಾ ಇಲ್ಲಾಂದ್ರ ನೇಕಾರಿಕಿ. ಭೂಮಿ ಇಲ್ಲದವರು ಕೂಲಿ ಮಾಡ್ತಾರ್ರಿ, ಹೊಲದಾಗ ಕೂಲಿ ಸಿಗಲಿಲ್ಲಾಂದ್ರ ಸಾವಕಾರ್ರ ಹತ್ರ ಮಗ್ಗ ಹೊಡೀತಾರ್ರಿ. ಅವರ ಕಣ್ಣುಗಳಲ್ಲಿ ವಿಷಾದ, ಅಸಮಾಧಾನ, ಬೇಸರ, ಜಿಗುಪ್ಸೆ ತುಂಬಿತ್ತೆ? ದಿನ ರಾತ್ರಿ ದುಡಿದರೂ ಬರುವ ಆದಾಯ ಅಷ್ಟಕ್ಕಷ್ಟೇ. 'ಅಜ್ಜ ನೂತದ್ದೆಲ್ಲಾ ಮೊಮ್ಮಗನ ಉಡುದಾರಕ್ಕೆ' ಎಂಬಂತೆ ಹೀಗೆ ಬಂದ ಆದಾಯವೆಲ್ಲ ಹಿಂದೆ ಮಾಡಿದ ಸಾಲಕ್ಕೇ ಸರಿ ಹೋಗುತ್ತದೆ ನಿಜ. ಹೀಗಾಗಿ ಜಗಕೆಲ್ಲ ಬಟ್ಟೆ ಕೊಡುವ ನೇಕಾರ ತಾನು ಮಾತ್ರ ಅರೆ ಬೆತ್ತಲೆಯಾಗಿಯೇ ಬದುಕುತ್ತಾನೆ.

## ಕಾಯಕವೇ ಕೈಲಾಸ!

ಇಳಕಲ್ ಸೀರೆಗಳನ್ನು ಎಂಟನೇ ಶತಮಾನದಿಂದಲೇ ನೇಯಲಾಗುತಿತ್ತು ಎಂಬ ಐತಿಹ್ಯಗಳಿವೆ. ಇಳಕಲ್ ಹಾಗೂ ಸುತ್ತಮುತ್ತಲ ಊರುಗಳಲ್ಲಿ ವಿಜಯ ಮಹಾಂತೇಶ ಸ್ವಾಮಿಗಳ ಪ್ರಭಾವ ಎದ್ದು ಕಾಣುತ್ತದೆ. ಸಮೀಪದ ಕೂಡಲಸಂಗಮದ ಬಸವಣ್ಣನವರ ಪ್ರಭಾವವೂ ದಟ್ಟವಾಗಿದೆ. ಈ ಭಾಗದಲ್ಲಿ ಬೆಳೆಯುವ ಹತ್ತಿ ಹಾಗೂ ಬಳ್ಳಾರಿ ಭಾಗದ ಶ್ರೀಮಂತ ಕುಳಗಳಿಂದ ಈ ನೇಯ್ಗೆ ಉದ್ಯಮ ಬೆಳೆಯಿತು ಎಂದು ಹೇಳಲಾಗುತ್ತದೆ. ಇಂದು ಅಳಿವಿನ ಅಂಚಿನಲ್ಲಿರುವ ಈ ಉದ್ಯಮದಲ್ಲಿ ಸುಮಾರು ಸಾವಿರಾರು ಕುಟುಂಬಗಳು ತೊಡಗಿಸಿಕೊಂಡಿದೆ. ತೊಂಬತ್ತರ ದಶಕದಲ್ಲಿ ಪ್ರಾರಂಭವಾದ ಗ್ರಾನೈಟ್ ಉದ್ಯಮ ಬಡವಬಲ್ಲಿದರ ಅಂತರವನ್ನು ಭೂಮಿ ಆಕಾಶದಷ್ಟು ಹೆಚ್ಚಿಸಿದೆ. ಇಳಕಲ್ ನೇಕಾರರನ್ನು ಮೂರು ವಿಧವಾಗಿ ವಿಂಗಡಿಸಬಹುದು. ಸ್ವಂತ ಮಗ್ಗದಲ್ಲಿ ನೇಯುವವರು ಮಾಸ್ಟರ್ ವೀವರ್‌ಗಳ ಬಳಿ ನೇಯುವವರು ಹಾಗೂ ಸಹಕಾರ ಸಂಘಗಳಿಗಾಗಿ ದುಡಿಯುವವರು.

ಈ ಸೀರೆ ತನ್ನ ಸಾಂಪ್ರದಾಯಿಕ ಸೌಂದರ್ಯ, ಆಕರ್ಷಕ ವರ್ಣ ಸಂಯೋಜನೆ, ದಿಟ್ಟ ಉಜ್ವಲ ಬಣ್ಣಗಳು ಹಾಗೂ 'ಕೊಂಡಿ' ತಂತ್ರಗಳಿಂದ ಗಮನಸೆಳೆಯುತ್ತದೆ. ಇಳಕಲ್ ಸೀರೆ ಹಾಗೂ ಗುಳೇದಗುಡ್ಡದ ಖಣಗಳದ್ದು ಒಂದು ಅಮೋಘ